# ಶುರೂತ್ ಲಾ ಇಲಾಹ ಇಲ್ಲಲ್ಲಾಹ್

شروط لا إله إلا الله

< ಕನ್ನಡ ಭಾಷೆ -الكنادي-kannada >

ಅಬ್ದುಲ್ಲಾಹ್ ಇಬ್ನ್ ಅಬ್ದುರ್ರಹ್ಮಾನ್ ಅಲ್‌ಜಿಬ್ರೀನ್

عبد الله بن عبد الرحمن الجبرين

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಹಸೈನಾರ್ ಸ್ವಲಾಹಿ

ترجمة: محمد حمزة البتوري

مراجعة: حسينار الصلاحي

## ಶುರೂತ್ ಲಾ ಇಲಾಹ ಇಲ್ಲಲ್ಲಾಹ್

## (ಲಾ ಇಲಾಹ ಇಲ್ಲಲ್ಲಾಹ್ ಎಂಬ ಸಾಕ್ಷಿ ವಚನದ ಷರತ್ತುಗಳು)

ಸರ್ವಸ್ತುತಿ ಅಲ್ಲಾಹನಿಗೆ ಮೀಸಲು. ಅಲ್ಲಾಹನ ರಸೂಲ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಹಾಬಾಗಳ ಮೇಲೆ, ಮತ್ತು ಅವರ ಮಾರ್ಗದರ್ಶನದ ಪ್ರಕಾರ ಜೀವನವನ್ನು ಸಾಗಿಸುವವರ ಮೇಲೆ ಸಲಾತ್ ಮತ್ತು ಸಲಾಮ್ ಇರಲಿ.

ಮುಂದುವರಿದು ಹೇಳುವುದೇನೆಂದರೆ,

ಎರಡು ಸಾಕ್ಷಿ ವಚನಗಳು *(ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್)* ಇಸ್ಲಾಮ್ ಧರ್ಮದ ಮೂಲಭೂತ ಸ್ಥಂಭವಾಗಿದೆ, ಸ್ವರ್ಗದ ಕೀಲಿಕೈಯಾಗಿದೆ ಮತ್ತು ನರಕವನ್ನು ಪ್ರವೇಶಿಸದಂತೆ ತಡೆಯುವ ಒಂದು ತಡೆಯಾಗಿದೆ. ಆ ಎರಡು ವಚನಗಳನ್ನು ಉಚ್ಛರಿಸುವ ಪ್ರತಿಯೊಬ್ಬ ಮುಸ್ಲಿಮ್ ಪುರುಷ ಮತ್ತು ಮುಸ್ಲಿಮ್ ಸ್ತ್ರೀಯ ಮೇಲೆ, –ಆ ಎರಡು ವಚನಗಳು ಅವರಿಗೆ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಪ್ರಯೋಜನ ನೀಡಬೇಕಾದರೆ– ಆ ಎರಡು ವಚನಗಳ ಷರತ್ತುಗಳನ್ನು ಕಲಿಯುವುದು ಕಡ್ಡಾಯವಾಗಿದೆ. ಶೈಖ್ ಡಾ। ಅಬ್ದುಲ್ಲಾಹ್ ಇಬ್ನ್ ಅಬ್ದುರ್ರಹ್ಮಾನ್ ಅಲ್‌ಜಿಬ್ರೀನ್ (ಅಲ್ಲಾಹು ಅವರ ಪದವಿಯನ್ನು ಮತ್ತು ಸ್ಥಾನಮಾನವನ್ನು ಏರಿಸಲಿ) ರವರು ಬರೆದ *'ಅಶ್ಶಹಾದತಾನಿ ಮಅ್‌ನಾಹುಮಾ ವಮಾ ತಸ್ತಲ್‌ಝಿಮುಹು ಕುಲ್ಲುನ್ ಮಿನ್‌ಹುಮಾ'* (ಎರಡು ಸಾಕ್ಷಿ ವಚನಗಳು, ಅವುಗಳ ಅರ್ಥ ಮತ್ತು ಅವುಗಳಲ್ಲಿ ಪ್ರತಿಯೊಂದು ವಚನವೂ ಅನಿವಾರ್ಯಗೊಳಿಸುವಂತದ್ದು) ಎಂಬ ಪುಸ್ತಕವನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ನೀಡಲಾಗಿದೆ.

ಶೈಖ್ ಅಬ್ದುಲ್ಲಾಹ್ ಇಬ್ನ್ ಅಬ್ದುರ್ರಹ್ಮಾನ್ ಅಲ್‌ಜಿಬ್ರೀನ್ (ಅಲ್ಲಾಹು ಅವರ ಪದವಿಯನ್ನು ಮತ್ತು ಸ್ಥಾನಮಾನವನ್ನು ಏರಿಸಲಿ) ಹೇಳುತ್ತಾರೆ:

*ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿ ವಚನಕ್ಕೆ ಉಲಮಾಗಳು ಏಳು ಷರತ್ತುಗಳನ್ನು ಪ್ರಸ್ತಾಪಿಸಿದ್ದಾರೆ. ಆ ಏಳು ಷರತ್ತುಗಳನ್ನು ಅವರಲ್ಲೊಬ್ಬರು ಪದ್ಯರೂಪದಲ್ಲಿ ಹೀಗೆ ಹೊಸೆದಿದ್ದಾರೆ:

عِلْمٌ وَيَقِينٌ وَإِخْلَاصٌ وَصِدْقُكَ مَعَ مَحَبَّةٍ وَانْقِيَادٍ وَالْقَبُولِ لَهَا

ಆ ಏಳು ಷರತ್ತುಗಳು: ಇಲ್ಮ್ (ಅರಿವು), ಯಕೀನ್ (ದೃಢವಿಶ್ವಾಸ), ಇಖ್ಲಾಸ್ (ನಿಷ್ಕಳಂಕತೆ), ಸಿದ್ಕ್ (ಸತ್ಯಸಂಧತೆ), ಮಹಬ್ಬತ್ (ಪ್ರೀತಿ), ಇನ್ಕಿಯಾದ್ (ಶರಣಾಗತಿ) ಮತ್ತು ಕಬೂಲ್ (ಸ್ವೀಕಾರ). ಈ ಏಳು ಷರತ್ತುಗಳನ್ನು ಕುರ್‌ಆನ್ ಮತ್ತು ಸುನ್ನತ್ತಿನಲ್ಲಿರುವ ಸ್ಪಷ್ಟ ಪುರಾವೆಗಳಿಂದ ಸಂಶೋಧಿಸಿ ತೆಗೆಯಲಾಗಿದೆ. ಕೆಲವು ಉಲಮಾಗಳು ಇದಕ್ಕೆ ಎಂಟನೆಯ ಷರತ್ತನ್ನು ಸೇರಿಸಿದ್ದಾರೆ. ಅದನ್ನು ಪದ್ಯ ರೂಪದಲ್ಲಿ ಹೀಗೆ ಕಾಣಬಹುದು:

وَزِيدَ ثَامِنُهَا الْكُفْرَانُ مِنْكَ بِمَا سِوَى الْإِلَهِ مِنَ الْأَنْدَادِ قَدْ أَلَهَا

"ನೀನು ಅಲ್ಲಾಹನ ಹೊರತು ಇತರ ಸರ್ವ ಆರಾಧ್ಯರುಗಳಲ್ಲಿ ಅವಿಶ್ವಾಸವಿಡುವುದನ್ನು ಎಂಟನೆಯ ಷರತ್ತಾಗಿ ಸೇರಿಸಲಾಗಿದೆ."

ಈ ಎಂಟನೆಯ ಷರತ್ತನ್ನು ಕೆಳಗಿನ ಹದೀಸಿನಿಂದ ಸಂಶೋಧಿಸಲಾಗಿದೆ:

قال رَسُول اللَّهِ ﷺ: { مَنْ قَالَ لَا إِلَهَ إِلَّا اللَّهُ وَكَفَرَ بِمَا يُعْبَدُ مِنْ دُونِ اللَّهِ حَرُمَ مَالُهُ وَدَمُهُ وَحِسَابُهُ عَلَى اللَّهِ } رواه مسلم.

"ಅಲ್ಲಾಹನ ರಸೂಲ್(ﷺ) ಹೇಳಿದರು: ಯಾರು *ಲಾ ಇಲಾಹ ಇಲ್ಲಲ್ಲಾಹ್* (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂಬ ಸಾಕ್ಷಿ ವಚನವನ್ನು ಉಚ್ಛರಿಸಿ, ಅಲ್ಲಾಹನ ಹೊರತು ಆರಾಧಿಸಲ್ಪಡುವ ಸರ್ವ ಆರಾಧ್ಯರುಗಳಲ್ಲಿ ಸಂಪೂರ್ಣ ಅವಿಶ್ವಾಸವಿಡುತ್ತಾನೋ ಮತ್ತು ಆ ಆರಾಧ್ಯರುಗಳನ್ನು ಸಂಪೂರ್ಣ ನಿಷೇಧಿಸುತ್ತಾನೋ, ಅವನ ಸಂಪತ್ತು ಮತ್ತು ರಕ್ತ ಪವಿತ್ರವಾಗಿದೆ. (ಅಂದರೆ ಅವನ ಸಂಪತ್ತು ಮತ್ತು ರಕ್ತ ಇತರ ಮುಸ್ಲಿಮರಿಗೆ ನಿಷಿದ್ಧವಾಗಿದೆ) ಮತ್ತು ಅವನ ವಿಚಾರಣೆ ಮಾಡಬೇಕಾದ ಹೊಣೆ ಅಲ್ಲಾಹನದ್ದಾಗಿದೆ." [ಮುಸ್ಲಿಮ್]

ಇದನ್ನು ಪ್ರಸ್ತಾಪಿಸಿದ ಬಳಿಕ ಶೈಖ್ ಮುಹಮ್ಮದ್ ಇಬ್ನ್ ಅಬ್ದುಲ್ ವಹ್ಹಾಬ್(ﷺ) ತಮ್ಮ *ಕಿತಾಬು ತ್ತೌಹೀದ್* ಎಂಬ ಗ್ರಂಥದಲ್ಲಿ ಹೇಳುತ್ತಾರೆ:

"ಇದು *ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿವಚನದ ಅರ್ಥವನ್ನು ವಿವರಿಸುವುದಕ್ಕಿರುವ ಅತಿದೊಡ್ಡ ವಿವರಣೆಯಾಗಿದೆ. *ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿವಚನವನ್ನು ಕೇವಲ ನಾಲಗೆಯಿಂದ ಉಚ್ಛರಿಸಿದ ಮಾತ್ರಕ್ಕೆ, ಅಥವಾ ಅದರ ಅರ್ಥವನ್ನು ಅರಿತು ಉಚ್ಛರಿಸಿದ ಮಾತ್ರಕ್ಕೆ, ಅಥವಾ ಅದನ್ನು ಅಂಗೀಕರಿಸಿದ ಮಾತ್ರಕ್ಕೆ, ಅಥವಾ ಅಲ್ಲಾಹನೊಂದಿಗೆ ಮಾತ್ರ ಪ್ರಾರ್ಥಿಸಿದ ಮಾತ್ರಕ್ಕೆ ಒಬ್ಬ ವ್ಯಕ್ತಿಯ ಸಂಪತ್ತು ಮತ್ತು ರಕ್ತ ಪವಿತ್ರವಾಗುತ್ತದೆ ಎಂದು ಈ ಹದೀಸಿನಲ್ಲಿ ಹೇಳಲಾಗಿಲ್ಲ. ಬದಲಾಗಿ ಎಲ್ಲಿಯ ತನಕ ಅವನು ಅಲ್ಲಾಹನ ಹೊರತು ಆರಾಧಿಸಲ್ಪಡುವ ಸರ್ವ ಆರಾಧ್ಯರುಗಳಲ್ಲೂ ಸಂಪೂರ್ಣ ಅವಿಶ್ವಾಸವಿಡುತ್ತಾನೋ ಮತ್ತು ಅವರನ್ನು ಸಂಪೂರ್ಣ ನಿಷೇಧಿಸುತ್ತಾನೋ ಅಲ್ಲಿಯ ತನಕ ಅವನ ಸಂಪತ್ತು ಮತ್ತು ರಕ್ತ ಪವಿತ್ರವಾಗುವುದಿಲ್ಲ. ಅವನಿಗೆ ಈ ವಿಷಯದಲ್ಲಿ ಅಲ್ಪವಾದರೂ ಸಂಶಯವಿದ್ದರೂ ಸಹ ಅವನ ಸಂಪತ್ತು ಮತ್ತು ರಕ್ತ ಪವಿತ್ರವಾಗುವುದಿಲ್ಲ..."

ಈ ಎಂಟನೆಯ ಷರತ್ತಿನ ಅರ್ಥವು: ಅಲ್ಲಾಹನ ಹೊರತು ಆರಾಧಿಸಲ್ಪಡುವ ಇತರ ಸರ್ವ ಆರಾಧ್ಯರಿಗಿರುವ ಆರಾಧನೆಯು *(ಇಬಾದತ್)* ನಿಷ್ಫಲವಾಗಿದೆ, ಮತ್ತು ಆ ಆರಾಧನೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ದೃಢವಾಗಿ ವಿಶ್ವಾಸವಿಡುವುದು. ಅಲ್ಲಾಹನಿಗೆ ಮಾತ್ರ ಅರ್ಪಿಸಬೇಕಾದ ಆರಾಧನೆಗಳಲ್ಲಿ ಒಂದಂಶವನ್ನಾದರೂ ಅಲ್ಲಾಹು ಅಲ್ಲದವರಿಗೆ ಅರ್ಪಿಸಿದರೆ, ಅವನು ಪಥಭ್ರಷ್ಟನೂ, ಬಹುದೇವವಿಶ್ವಾಸಿಯೂ *(ಮುಶ್ರಿಕ್)* ಆಗಿ ಮಾರ್ಪಡುವನು ಎಂದು ದೃಢವಾಗಿ ವಿಶ್ವಾಸವಿಡುವುದು. ಅಲ್ಲಾಹನ ಹೊರತು ಆರಾಧಿಸಲ್ಪಡುವ ಗೋರಿಗಳು, ಗುಮ್ಮಟಗಳು, ಸ್ಥಳಗಳು, ವಿಗ್ರಹಗಳು, ಮರಗಳು,

ಕಲ್ಲುಗಳು ಮುಂತಾದವುಗಳೆಲ್ಲವೂ ಬಹುದೇವವಿಶ್ವಾಸಿಗಳ *(ಮುಶ್ರಿಕ್‌ಗಳ)* ಅಜ್ಞಾನದಿಂದ ಮತ್ತು ಅಂಧವಿಶ್ವಾಸಗಳಿಂದ ಉದ್ಭವಿಸಿದ್ದಾಗಿವೆ, ಅವುಗಳಿಗೆ ಅಲ್ಲಾಹು ಯಾವುದೇ ಪುರಾವೆಯನ್ನೂ ಅವತೀರ್ಣಗೊಳಿಸಿಲ್ಲ ಎಂದು ದೃಢವಾಗಿ ವಿಶ್ವಾಸವಿಡುವುದು. ಯಾರು ಅವರ *(ಮುಶ್ರಿಕ್‌ಗಳ)* ಈ ಪ್ರವೃತ್ತಿಯನ್ನು ಅಂಗೀಕರಿಸುತ್ತಾನೋ, ಅಥವಾ ಅವರು ಮಾಡುತ್ತಿರುವುದು ತಪ್ಪು ಹೌದೋ ಅಲ್ಲವೋ ಎಂದು ಸಂಶಯ ತಾಳುತ್ತಾನೋ, ಅಥವಾ ಅವರು ಮಾಡುತ್ತಿರುವ ಆರಾಧನೆಯು ನಿಷ್ಫಲವೋ ಅಲ್ಲವೋ ಎಂಬ ವಿಷಯದಲ್ಲಿ ಸಂಶಯ ತಾಳುತ್ತಾನೋ, ಅಂತಹ ವ್ಯಕ್ತಿ *ಮುವಹ್ಹಿದ್* (ಏಕದೇವವಿಶ್ವಾಸಿ) ಆಗಲಾರ. ಆತ *ಲಾ ಇಲಾಹ ಇಲ್ಲಲ್ಲಾಹ್* ಉಚ್ಚರಿಸಿ, ಅಲ್ಲಾಹನ ಹೊರತು ಇತರ ಯಾರನ್ನೂ ಆರಾಧಿಸದಿದ್ದರೂ ಸಹ, ಅವನು *ಮುವಹ್ಹಿದ್* (ಏಕದೇವವಿಶ್ವಾಸಿ) ಆಗಲಾರ.

ಉಲಮಾಗಳು –ಅಲ್ಲಾಹು ಅವರ ಮೇಲೆ ಕರುಣೆ ತೋರಲಿ– ಅವರ ಗ್ರಂಥಗಳಲ್ಲಿ ಪ್ರಸ್ತಾಪಿಸಿದ ಇತರ ಏಳು ಷರತ್ತುಗಳು ಹೀಗಿವೆ. ಪ್ರತಿಯೊಂದು ಷರತ್ತನ್ನೂ ನಾವು ಇಲ್ಲಿ ಪುರಾವೆ ಸಹಿತ ವಿವರಿಸುವೆವು. ಇನ್ ಶಾ ಅಲ್ಲಾಹ್.

**1. ಇಲ್ಮ್ (ಅರಿವು):** ಇದರ ಪುರಾವೆ ಅಲ್ಲಾಹನ ವಚನ:

﴿ فَٱعۡلَمۡ أَنَّهُۥ لَآ إِلَٰهَ إِلَّا ٱللَّهُ ﴾ [محمد : 19].

“ಅರಿತುಕೋ! ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಇತರ ಯಾರಿಗೂ ಇಲ್ಲ ಎಂದು.” [ಕುರ್‌ಆನ್ 47:19]

ಪ್ರವಾದಿ(ﷺ)ರವರ ವಚನ:

عَنْ عُثْمَانَ رَضِيَ اللَّهُ عَنْهُ قَالَ: قَالَ رَسُولُ اللَّهِ ﷺ: { مَنْ مَاتَ وَهُوَ يَعْلَمُ أَنَّهُ لَا إِلَهَ إِلَّا اللَّهُ دَخَلَ الْجَنَّةَ } رواه مسلم.

“ಉಸ್ಮಾನ್(ರ)ರಿಂದ ವರದಿ: ಅಲ್ಲಾಹನ ರಸೂಲ್(ﷺ) ಹೇಳಿದರು: ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಇತರ ಯಾರಿಗೂ ಇಲ್ಲವೆಂಬುದನ್ನು ಅರಿತಿರುವ ಸ್ಥಿತಿಯಲ್ಲಿ ಯಾರು ಮರಣಹೊಂದುತ್ತಾನೋ ಅವನು ಸ್ವರ್ಗವನ್ನು ಪ್ರವೇಶಿಸಿದನು.” [ಮುಸ್ಲಿಮ್]

ಇಲ್ಲಿ ಇಲ್ಮ್ (ಅರಿವು) ಎಂಬುದರ ಉದ್ದೇಶವು: ಎರಡು ಸಾಕ್ಷಿ ವಚನಗಳು ಸೂಚಿಸುವ ನಿಜವಾದ ಅರ್ಥ ಮತ್ತು ಅವೆರಡೂ ಅನಿವಾರ್ಯಗೊಳಿಸುವ ಕ್ರಿಯೆಗಳು. *ಜಹ್ಲ್* (ಅಜ್ಞಾನ) ಇದರ ವಿರುದ್ಧ ಪದವಾಗಿದೆ. ಅಜ್ಞಾನವು ನಮ್ಮ ಈ ಸಮುದಾಯದಲ್ಲಿ ಅನೇಕ ಜನರನ್ನು ಶಿರ್ಕಿನಲ್ಲಿ ಬೀಳಿಸಿದೆ. *ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿ ವಚನವು ನಿಷೇಧ ಮತ್ತು ದೃಢೀಕರಣವನ್ನು ಹೊಂದಿದೆ ಎಂಬ ಇಲ್ಮ್ (ಅರಿವು) ಇವರಿಗಿಲ್ಲ. ಅಂದರೆ *ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿ ವಚನದ ಆದ್ಯಭಾಗವು ಅಲ್ಲಾಹನ ಹೊರತು ಆರಾಧಿಸಲ್ಪಡುವ ಸರ್ವವನ್ನೂ ನಿಷೇಧಿಸಿದರೆ ಅದರ ಎರಡನೆ ಭಾಗವು ಆರಾಧಿಸಲ್ಪಡುವ ಹಕ್ಕನ್ನು ಅಲ್ಲಾಹನಿಗೆ ಮಾತ್ರ ದೃಢೀಕರಿಸುತ್ತದೆ. ಆದ್ಯಕಾಲದ ಮುಶ್ರಿಕರು (ಮಕ್ಕಾ

ಮುಶ್ರಿಕರು) ಈ ಸಾಕ್ಷಿ ವಚನದ ನಿಜವಾದ ಅರ್ಥವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು ಮತ್ತು ಈ ಕಾರಣದಿಂದಲೇ ಅವರು *ಲಾ ಇಲಾಹ ಇಲ್ಲಲ್ಲಾಹ್* ಎಂಬ ಈ ಸಾಕ್ಷಿವಚನವನ್ನು ಉಚ್ಛರಿಸಲು ಹಿಂದೇಟು ಹಾಕಿದ್ದರು ಎಂಬುದನ್ನು ಅರಿಯುವಲ್ಲಿ ಇವರು ವಿಫಲರಾಗಿದ್ದಾರೆ.

**2. *ಯಕೀನ್* (ದೃಢವಿಶ್ವಾಸ):** ಅಂದರೆ ಸಂಶಯ ಮತ್ತು ಹಿಂಜರಿಕೆಗೆ ವಿರುದ್ಧವಾಗಿರುವ (ಅಂದರೆ ಸಂಶಯ ಮತ್ತು ಹಿಂಜರಿಕೆಯನ್ನು ಸಂಪೂರ್ಣ ನಿರ್ಮೂಲನೆಗೊಳಿಸುವ) ದೃಢವಿಶ್ವಾಸ. ಅಥವಾ ಕೇವಲವೊಂದು ಊಹೆ ಮತ್ತು ಸಂದೇಹದ ಮೇಲೆ ಅವಲಂಬಿತವಾಗಿರದ ವಿಶ್ವಾಸ. ಅಂದರೆ ಈ ಎರಡು ಸಾಕ್ಷಿ ವಚನಗಳನ್ನು ಉಚ್ಛರಿಸಿದ ವ್ಯಕ್ತಿಗೆ ಅವನ ಹೃದಯದಲ್ಲಿ ಈ ಎರಡು ಸಾಕ್ಷಿವಚನಗಳ ಬಗ್ಗೆ ದೃಢವಾದ ವಿಶ್ವಾಸವಿರಬೇಕು. ಅದು ಕೇವಲ ಒಂದು ಊಹೆಯೋ ಅಥವಾ ಸಂಶಯವು ಬೆರೆತಿರುವ ಒಂದು ವಿಶ್ವಾಸವೋ ಆಗಿರಬಾರದು. ತಾನು ಏನು ಉಚ್ಛರಿಸುತ್ತಿರುವೆನೋ ಅದನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರಲ್ಲಿ ದೃಢವಾದ ವಿಶ್ವಾಸವಿಟ್ಟು ಉಚ್ಛರಿಸಿದವನಾಗಿರಬೇಕು. ಅಂದರೆ ಆರಾಧಿಸಲ್ಪಡಬೇಕಾದ ಹಕ್ಕನ್ನು ಹೊಂದಿರುವವನು ಅಲ್ಲಾಹು ಮಾತ್ರ. ಅವನ ಹೊರತು ಇತರ ಯಾರಿಗೂ ಆ ಹಕ್ಕಿಲ್ಲ. ಅವನ ಹೊರತು ಇತರರಿಗೆ ಆರಾಧನೆ ಸಲ್ಲಿಸುವುದು ವ್ಯರ್ಥ. ಮುಹಮ್ಮದ್(ﷺ)ರವರು ನಿಜವಾಗಿಯೂ ಅಲ್ಲಾಹನ ಸಂದೇಶವಾಹಕರು. ಅವರ ನಂತರ ಬೇರೆ ಪ್ರವಾದಿಯಿಲ್ಲ. ಅವರ ನಂತರ ಪ್ರವಾದಿತ್ವವನ್ನು ವಾದಿಸುವವರೆಲ್ಲರೂ ಸುಳ್ಳುಗಾರರು ಎಂದು ದೃಢವಾಗಿ ವಿಶ್ವಾಸವಿಟ್ಟವನಾಗಿರಬೇಕು. ಯಾರಿಗಾದರೂ ಈ ಮೇಲಿನ ವಿಷಯಗಳಲ್ಲಿ ಸಂಶಯವಿದ್ದರೆ ಅಥವಾ ಇದನ್ನು ಸ್ವೀಕರಿಸಲು ಹಿಂಜರಿಕೆಯಿದ್ದರೆ ಅವನಿಗೆ ಈ ಎರಡು ಸಾಕ್ಷಿ ವಚನಗಳು ಯಾವುದೇ ಪ್ರಯೋಜನವನ್ನೂ ನೀಡುವುದಿಲ್ಲ. ಇದಕ್ಕಿರುವ ಪುರಾವೆ ಈ ಕೆಳಗಿನ ಹದೀಸ್:

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ ﷺ قَالَ : { لَا يَلْقَى اللَّهَ بِهِمَا عَبْدٌ غَيْرَ شَاكٍّ فِيهِمَا إِلَّا دَخَلَ الْجَنَّةَ} رواه مسلم.

"ಅಬೂ ಹುರೈರಃ(ﷺ)ರಿಂದ ವರದಿ: ಪ್ರವಾದಿ(ﷺ) ಹೇಳಿದರು: *ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುನ್ ರಸೂಲುಲ್ಲಾಹ್* ಎಂಬ ಎರಡು ಸಾಕ್ಷಿ ವಚನಗಳೊಂದಿಗೆ –ಅವೆರಡರಲ್ಲಿ ಯಾವುದೇ ಸಂಶಯವನ್ನೂ ಹೊಂದಿರದ ಸ್ಥಿತಿಯಲ್ಲಿ– ಅಲ್ಲಾಹನನ್ನು ಭೇಟಿಯಾಗುವವರಾರೂ ಸ್ವರ್ಗವನ್ನು ಪ್ರವೇಶಿಸದೆ ಇರಲಾರರು." [ಮುಸ್ಲಿಮ್]

ಇನ್ನೊಂದು ಹದೀಸಿನಲ್ಲಿ ಹೀಗಿದೆ:

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ ﷺ قَالَ : {مَنْ لَقِيتَ مِنْ وَرَاءِ هَذَا الْحَائِطِ يَشْهَدُ أَنْ لَا إِلَهَ إِلَّا اللَّهُ مُسْتَيْقِنًا بِهَا قَلْبُهُ فَبَشِّرْهُ بِالْجَنَّةِ} رواه مسلم.

"ಅಬೂ ಹುರೈರಃ(ﷺ)ರಿಂದ ವರದಿ: ಪ್ರವಾದಿ(ﷺ) ಹೇಳಿದರು: ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ ಎಂದು ಹೃದಯದಲ್ಲಿ ದೃಢವಾಗಿ ವಿಶ್ವಾಸವಿಟ್ಟಿರುವ ಯಾವುದೇ

ವ್ಯಕ್ತಿಯನ್ನು ಈ ಗೋಡೆಯ ಆಚೆ ನೀನು ಭೇಟಿಯಾದರೆ ಅವನಿಗೆ ಸ್ವರ್ಗದ ಬಗ್ಗೆ ಶುಭವಾರ್ತೆ ತಿಳಿಸು." [ಮುಸ್ಲಿಮ್]

ವಿಶ್ವಾಸಿಗಳನ್ನು ಪ್ರಶಂಸಿಸುತ್ತಾ ಅಲ್ಲಾಹು ಹೇಳುತ್ತಾನೆ:

﴿ إِنَّمَا ٱلْمُؤْمِنُونَ ٱلَّذِينَ ءَامَنُوا۟ بِٱللَّهِ وَرَسُولِهِۦ ثُمَّ لَمْ يَرْتَابُوا۟ ﴾ [الحجرات : 15] .

"ಅಲ್ಲಾಹನಲ್ಲಿ ಮತ್ತು ಅವನ ರಸೂಲರಲ್ಲಿ ವಿಶ್ವಾಸವಿಟ್ಟು, ತರುವಾಯ ಯಾವುದೇ ರೀತಿಯಲ್ಲೂ ಸಂಶಯ ಪಡದವರು ಯಾರೋ ಅವರು ಮಾತ್ರವೇ ನಿಜವಾದ ವಿಶ್ವಾಸಿಗಳು." [ಕುರ್‌ಆನ್ 49:15]

ಕಪಟ ವಿಶ್ವಾಸಿಗಳನ್ನು ಆಕ್ಷೇಪಿಸುತ್ತಾ ಅಲ್ಲಾಹು ಹೇಳುತ್ತಾನೆ:

﴿ وَٱرْتَابَتْ قُلُوبُهُمْ فَهُمْ فِى رَيْبِهِمْ يَتَرَدَّدُونَ ﴿٤٥﴾ ﴾ [التوبة : 45] .

"ಅವರ ಹೃದಯಗಳು ಸಂಶಯಗಳಿಂದ ತುಂಬಿಹೋಗಿವೆ. ಆದ್ದರಿಂದ ಅವರು ತಮ್ಮ ಸಂಶಯದಲ್ಲಿಯೇ ತೊಳಲಾಡುತ್ತಿದ್ದಾರೆ." [ಕುರ್‌ಆನ್ 9:45]

ಇಬ್ನ್ ಮಸ್‌ಊದ್(ﷺ)ರವರು ಹೀಗೆ ಹೇಳಿದ್ದಾಗಿ ವರದಿಯಾಗಿದೆ:

الصَّبْرُ نِصْفُ الْإِيمَانِ وَالْيَقِينُ الْإِيمَانُ كُلُّهُ

"ತಾಳ್ಮೆಯು ಈಮಾನಿನ (ವಿಶ್ವಾಸದ) ಅರ್ಧಭಾಗವಾದರೆ ದೃಢವಿಶ್ವಾಸವೆಂಬುದು ಸಂಪೂರ್ಣ ಈಮಾನ್ ಆಗಿದೆ."

*ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್* ಎಂಬ ಎರಡು ಸಾಕ್ಷಿ ವಚನಗಳ ಅರ್ಥವನ್ನು ಅರಿತು ಅದರಲ್ಲಿ ದೃಢವಾಗಿ ವಿಶ್ವಾಸವಿಡುವ ವ್ಯಕ್ತಿಯ ಅಂಗಾಂಗಗಳು ಅಲ್ಲಾಹನನ್ನು ಮಾತ್ರ ಆರಾಧಿಸುವುದರ ಕಡೆಗೆ ಮತ್ತು ರಸೂಲ್(ﷺ)ರವರ ಆಜ್ಞಾಪಾಲನೆ ಮಾಡುವುದರ ಕಡೆಗೆ ಮಾತ್ರ ಚಲಿಸುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

**3. *ಕಬೂಲ್* (ಸ್ವೀಕಾರ):** ಅಂದರೆ ತಿರಸ್ಕಾರಕ್ಕೆ ವಿರುದ್ಧವಾಗಿರುವ (ಅಂದರೆ ತಿರಸ್ಕರಿಸುವುದನ್ನು ಸಂಪೂರ್ಣ ನಿರ್ಮೂಲನೆಗೊಳಿಸುವ) ಸ್ವೀಕಾರ. ಜನರಲ್ಲಿ ಕೆಲವರು *ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್* ಎಂಬ ಎರಡು ಸಾಕ್ಷಿವಚನಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತಾರೆ. ಅವೆರಡು ವಚನಗಳು ಏನನ್ನು ಸೂಚಿಸುತ್ತದೋ ಅದರಲ್ಲಿ ಅವರಿಗೆ ದೃಢವಾದ ವಿಶ್ವಾಸವಿರುತ್ತದೆ. ಆದರೆ ಅಹಂಕಾರ ಮತ್ತು ಅಸೂಯೆಯ ಕಾರಣದಿಂದ ಅವರು *ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್* ವನ್ನು ತಿರಸ್ಕರಿಸುತ್ತಾರೆ. ಇದು ಯಹೂದ ಮತ್ತು ಕ್ರೈಸ್ತ ವಿದ್ವಾಂಸರ ಸ್ಥಿತಿಯಾಗಿತ್ತು. ಆರಾಧಿಸಲ್ಪಡುವ ಹಕ್ಕನ್ನು ಹೊಂದಿರುವವನು ಅಲ್ಲಾಹು ಮಾತ್ರವೆಂಬುದಕ್ಕೆ ಅವರು ಸಾಕ್ಷಿಯಾಗಿದ್ದರು. ತಮ್ಮ ಮಕ್ಕಳನ್ನು ಗುರುತಿಸುವಂತೆಯೇ ಅವರು

ಮುಹಮ್ಮದ್(ﷺ)ರವರನ್ನು ಪ್ರವಾದಿಯೆಂದು ಗುರುತಿಸಿದ್ದರು. ಆದರೂ ಸಹ ಅವರು *ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್* ಎಂಬ ಎರಡು ಸಾಕ್ಷಿವಚನಗಳನ್ನು ಸ್ವೀಕರಿಸಲು ಅವರು ಹಿಂಜರಿದರು. ಯಾಕೆಂದರೆ ಅಲ್ಲಾಹು ಹೇಳಿದಂತೆ ಇದು ಅವರು ತಮ್ಮಲ್ಲಿ ಹೊಂದಿದ್ದ ಅಸೂಯೆಯ ಕಾರಣದಿಂದಾಗಿತ್ತು. [ಕುರ್‌ಆನ್ 2:109]

ಮಕ್ಕಾ ಮುಶ್ರಿಕರ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಅವರು *ಲಾ ಇಲಾಹ ಇಲ್ಲಲ್ಲಾಹ್* ಎಂಬ ಸಾಕ್ಷಿವಚನದ ಅರ್ಥವನ್ನು ಚೆನ್ನಾಗಿ ಅರಿತಿದ್ದರು. ಮುಹಮ್ಮದ್(ﷺ)ರವರ ಸತ್ಯಸಂಧತೆಗೆ ಅವರು ಸಾಕ್ಷಿಯಾಗಿದ್ದರು. ಹೀಗಿದ್ದೂ ಸಹ ಅವರು ಅಹಂಕಾರದಿಂದ *ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್* ಎಂಬ ಎರಡು ಸಾಕ್ಷಿ ವಚನಗಳನ್ನು ತಿರಸ್ಕರಿಸಿದರು.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ إِنَّهُمْ كَانُوٓا۟ إِذَا قِيلَ لَهُمْ لَآ إِلَٰهَ إِلَّا ٱللَّهُ يَسْتَكْبِرُونَ ﴾ [الصافات : 35] .

“ಖಂಡಿತವಾಗಿಯೂ ಅವರು (ಮಕ್ಕಾ ಮುಶ್ರಿಕರು), ಅವರೊಂದಿಗೆ *ಲಾ ಇಲಾಹ ಇಲ್ಲಲ್ಲಾಹ್* (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂದು ಹೇಳಲಾದರೆ, ಅವರು ಅಹಂಕಾರಪಡುತ್ತಿದ್ದರು.” [ಕುರ್‌ಆನ್ 37:35]

﴿ فَإِنَّهُمْ لَا يُكَذِّبُونَكَ وَلَٰكِنَّ ٱلظَّٰلِمِينَ بِـَٔايَٰتِ ٱللَّهِ يَجْحَدُونَ ﴾ [الأنعام : 33] .

“ಯಾಕೆಂದರೆ (ಓ ಪ್ರವಾದಿಯವರೇ!) ಖಂಡಿತವಾಗಿಯೂ ಅವರು ತಮ್ಮನ್ನು ನಿಷೇಧಿಸುತ್ತಿಲ್ಲ; ಬದಲಾಗಿ ಆ ಅಕ್ರಮಿಗಳು ನಿಷೇಧಿಸುತ್ತಿರುವುದು ಅಲ್ಲಾಹನ ದೃಷ್ಟಾಂತಗಳನ್ನಾಗಿದೆ.” [ಕುರ್‌ಆನ್ 6:33]

**4. *ಇನ್ಕಿಯಾದ್* (ಶರಣಾಗತಿ):** ಶರಣಾಗತಿ ಮತ್ತು ಸ್ವೀಕಾರದ ಮಧ್ಯೆಯಿರುವ ವ್ಯತ್ಯಾಸವೇನೆಂದರೆ ಶರಣಾಗತಿ ಎಂದರೆ ಕರ್ಮದ ಮೂಲಕ ಅನುಸರಿಸುವುದು ಮತ್ತು ಸ್ವೀಕಾರ ಎಂದರೆ ಮಾತಿನ ಮೂಲಕ ಅರ್ಥವನ್ನು ವ್ಯಕ್ತಪಡಿಸುವುದು. ಇವೆರಡೂ ಅನುಸರಣೆ ಮಾಡುವುದನ್ನು ಅನಿವಾರ್ಯಗೊಳಿಸುತ್ತದೆ.

*ಇನ್ಕಿಯಾದ್* ಎಂದರೆ ಸಂಪೂರ್ಣ ಶರಣಾಗತಿ. ಅಂದರೆ ಅಲ್ಲಾಹನ ನಿಯಮಗಳ ಪೈಕಿ ಯಾವುದನ್ನೇ ಆಗಲಿ ವಿಮರ್ಶಿಸುವುದೋ ಟೀಕಿಸುವುದೋ ಮಾಡದೆ ಅವುಗಳಿಗೆ ಸಂಪೂರ್ಣ ಶರಣಾಗುವುದು. ಅಲ್ಲಾಹು ಹೇಳುತ್ತಾನೆ:

﴿ وَأَنِيبُوٓا۟ إِلَىٰ رَبِّكُمْ وَأَسْلِمُوا۟ لَهُۥ ﴾ [الزمر : 54] .

“ನೀವು ನಿಮ್ಮ ರಬ್ಬಿನ ಕಡೆಗೆ ವಿನಮ್ರತೆಯಿಂದ ಮರಳಿರಿ ಮತ್ತು ಅವನಿಗೆ ಸಂಪೂರ್ಣ ಶರಣಾಗಿರಿ.” [ಕುರ್‌ಆನ್ 39:54]

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ وَمَنۡ أَحۡسَنُ دِينٗا مِّمَّنۡ أَسۡلَمَ وَجۡهَهُۥ لِلَّهِ وَهُوَ مُحۡسِنٞ﴾ [النساء : 125].

"ಸತ್ಕರ್ಮಿಯಾಗಿರುತ್ತಾ ತನ್ನ ಮುಖವನ್ನು ಅಲ್ಲಾಹನಿಗೆ ಶರಣಾಗಿಸಿದವನಿಗಿಂತಲೂ ಧರ್ಮವನ್ನು ಉತ್ತಮವಾಗಿ ಪಾಲಿಸಿದವನು ಯಾರಿದ್ದಾನೆ?" [ಕುರ್‌ಆನ್ 4:125]

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ ۞وَمَن يُسۡلِمۡ وَجۡهَهُۥٓ إِلَى ٱللَّهِ وَهُوَ مُحۡسِنٞ فَقَدِ ٱسۡتَمۡسَكَ بِٱلۡعُرۡوَةِ ٱلۡوُثۡقَىٰۗ﴾ [لقمن : 22].

"ಸತ್ಕರ್ಮಿಯಾಗಿರುತ್ತಾ ಯಾರು ಅಲ್ಲಾಹನಿಗೆ ತನ್ನ ಮುಖವನ್ನು ಶರಣಾಗಿಸುತ್ತಾನೋ ಅವನು ಅತ್ಯಂತ ಬಿಗಿಯಾದ ಹಿಡಿಕೆಯನ್ನು ಹಿಡಿದಿರುವನು." [ಕುರ್‌ಆನ್ 31:22]

ಅಲ್ಲಾಹನಿಗೆ ಶರಣಾಗಬೇಕಾದುದು ಅವನನ್ನು ಮಾತ್ರ ಆರಾಧಿಸುವ ಮೂಲಕ. ಅದೇ ರೀತಿ ಪ್ರವಾದಿ(ﷺ)ರವರಿಗೆ ಶರಣಾಗಬೇಕಾದುದು ಅವರ ಸುನ್ನತ್ತನ್ನು ಸ್ವೀಕರಿಸಿ, ಅವರು ತಂದಿರುವುದನ್ನು ಅನುಸರಿಸಿ, ಅವರ ತೀರ್ಪಿಗೆ ಸಂತೃಪ್ತಿ ಸೂಚಿಸುವ ಮೂಲಕ.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ فَلَا وَرَبِّكَ لَا يُؤۡمِنُونَ حَتَّىٰ يُحَكِّمُوكَ فِيمَا شَجَرَ بَيۡنَهُمۡ ثُمَّ لَا يَجِدُواْ فِيٓ أَنفُسِهِمۡ حَرَجٗا مِّمَّا قَضَيۡتَ وَيُسَلِّمُواْ تَسۡلِيمٗا ٦٥﴾ [النساء : 65].

"(ಓ ಪ್ರವಾದಿಯವರೇ!) ಇಲ್ಲ; ತಮ್ಮ ರಬ್ಬಿನ ಮೇಲಾಣೆ! ಅವರ ಮಧ್ಯೆ ಉದ್ಭವಿಸುವ ವಿವಾದಗಳಿಗೆ ಮತ್ತು ಸಮಸ್ಯೆಗಳಿಗೆ ಅವರು ತಮ್ಮನ್ನು ತೀರ್ಪುಗಾರನನ್ನಾಗಿ ಮಾಡಿ, ತರುವಾಯ ತಾವು ನೀಡುವ ತೀರ್ಪಿನ ಬಗ್ಗೆ ಅವರು ತಮ್ಮ ಮನಸ್ಸಿನಲ್ಲಿ ಯಾವುದೇ ಪ್ರಯಾಸವನ್ನು ಇಟ್ಟುಕೊಳ್ಳದೆ, ಆ ತೀರ್ಪಿಗೆ ಸಂಪೂರ್ಣ ಶರಣಾಗುವ ತನಕ ಅವರೆಂದೂ ನೈಜ ವಿಶ್ವಾಸಿಗಳಾಗಲಾರರು." [ಕುರ್‌ಆನ್ 4:65]

ವಿಶ್ವಾಸವು ಸಿಂಧುವಾಗಲು ಪ್ರವಾದಿ(ﷺ)ರವರ ತೀರ್ಪಿಗೆ ಶರಣಾಗುವುದನ್ನು, ಅಂದರೆ ಪ್ರವಾದಿ(ﷺ)ರವರು ಅಲ್ಲಾಹನ ಕಡೆಯಿಂದ ಏನನ್ನು ತಂದಿರುವರೋ ಅದಕ್ಕೆ ಸಂಪೂರ್ಣ ಶರಣಾಗುವುದನ್ನು ಅಲ್ಲಾಹು ಒಂದು ಷರತ್ತನ್ನಾಗಿ ಮಾಡಿದ್ದಾನೆ.

**5. *ಸಿದ್ಕ್* (ಸತ್ಯಸಂಧತೆ):** ಅಂದರೆ ಸುಳ್ಳಿಗೆ ವಿರುದ್ಧವಾಗಿರುವ (ಸುಳ್ಳನ್ನು ಸಂಪೂರ್ಣ ನಿವಾರಿಸುವ) ಸತ್ಯಸಂಧತೆ. ಸತ್ಯಸಂಧತೆಯು ಒಂದು ಶರತ್ತಾಗಿದೆ ಎಂಬುದಕ್ಕಿರುವ ಪುರಾವೆ ಈ ಕೆಳಗಿನ ಹದೀಸ್:

قَالَ النَّبِيُّ ﷺ : {مَنْ قَالَ لَا إِلَهَ إِلَّا اللَّهُ صَادِقًا مِنْ قَلْبِهِ دَخَلَ الْجَنَّةَ} رواه ابن عبد البر.

“ಪ್ರವಾದಿ(ﷺ) ಹೇಳಿದರು: ಯಾರು ತನ್ನ ಹೃದಯಾಂತರಾಳದಿಂದ ಸತ್ಯಸಂಧವಾಗಿ *ಲಾ ಇಲಾಹ ಇಲ್ಲಲ್ಲಾಹ್* (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂಬ ವಚನವನ್ನು ಉಚ್ಛರಿಸುತ್ತಾನೋ ಅವನು ಸ್ವರ್ಗವನ್ನು ಪ್ರವೇಶಿಸಿದನು.” [ಇಬ್ನ್ ಅಬ್ದಿಲ್ ಬರ್ರ್]

ಆದರೆ ಒಬ್ಬ ಈ ವಚನವನ್ನು ತನ್ನ ನಾಲಗೆಯ ಮೂಲಕ ಉಚ್ಛರಿಸುತ್ತಾನೆ. ಆದರೆ ಅವನ ಹೃದಯದಲ್ಲಿ ಅದರ ಬಗ್ಗೆ ದೃಢವಾದ ವಿಶ್ವಾಸವಿಲ್ಲ ಎಂದಾದರೆ ಈ ವಚನವನ್ನು ಉಚ್ಛರಿಸುವುದರಿಂದ ಅವನಿಗೆ ಯಾವುದೇ ಪ್ರಯೋಜನವಿಲ್ಲ.

ಪ್ರವಾದಿ(ﷺ)ರವರ ಬಳಿ ಬಂದಾಗಲೆಲ್ಲ ಕಪಟವಿಶ್ವಾಸಿಗಳು ಹೀಗೆನ್ನುತ್ತಿದ್ದರು:

﴿ نَشۡهَدُ إِنَّكَ لَرَسُولُ ٱللَّهِۗ ﴾ [المنافقون : 1] .

“ಖಂಡಿತವಾಗಿಯೂ ತಾವು ಅಲ್ಲಾಹನ ರಸೂಲ್ ಆಗಿರುವಿರಿ ಎಂದು ನಾವು ಸಾಕ್ಷಿ ನುಡಿಯುತ್ತೇವೆ.” [ಕುರ್‌ಆನ್ 63:1]

ಕಪಟ ವಿಶ್ವಾಸಿಗಳು ಇದನ್ನು ಹೇಳುತ್ತಿದ್ದುದು ಅವರ ನಾಲಗೆಯಿಂದ ಮಾತ್ರ. ಅವರ ಹೃದಯದಲ್ಲಿ ಅವರಿಗೆ ದೃಢವಿಶ್ವಾಸವಿರಲಿಲ್ಲ. ಆದ್ದರಿಂದ ಅವರಿಗೆ ಉತ್ತರವಾಗಿ ಅಲ್ಲಾಹು ಹೇಳುತ್ತಾನೆ:

﴿ وَٱللَّهُ يَعۡلَمُ إِنَّكَ لَرَسُولُهُۥ وَٱللَّهُ يَشۡهَدُ إِنَّ ٱلۡمُنَٰفِقِينَ لَكَٰذِبُونَ ١ ﴾ [المنافقون : 1] .

“(ಓ ಪ್ರವಾದಿಯವರೇ!) ಖಂಡಿತವಾಗಿಯೂ ತಾವು ಅಲ್ಲಾಹನ ರಸೂಲ್ ಆಗಿರುವಿರಿ ಎಂಬುದನ್ನು ಅಲ್ಲಾಹು ಅರಿತಿದ್ದಾನೆ. ಮತ್ತು ಖಂಡಿತವಾಗಿಯೂ ಕಪಟವಿಶ್ವಾಸಿಗಳು ಸುಳ್ಳು ನುಡಿಯುತ್ತಿದ್ದಾರೆ (ಅಂದರೆ ತಮ್ಮ ಹೃದಯದಲ್ಲಿಲ್ಲದಿರುವುದನ್ನು ಹೇಳುತ್ತಿದ್ದಾರೆ) ಎಂದು ಅಲ್ಲಾಹು ಸಾಕ್ಷಿ ನುಡಿಯುತ್ತಾನೆ.” [ಕುರ್‌ಆನ್ 63:1]

ಅದೇ ರೀತಿ ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَمِنَ ٱلنَّاسِ مَن يَقُولُ ءَامَنَّا بِٱللَّهِ وَبِٱلۡيَوۡمِ ٱلۡأٓخِرِ وَمَا هُم بِمُؤۡمِنِينَ ٨ ﴾ [البقرة : 8] .

“ನಾವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವಿಟ್ಟಿದ್ದೇವೆಂದು ಹೇಳುವ ಕೆಲವರು ಜನರಲ್ಲಿದ್ದಾರೆ. ಆದರೆ ವಾಸ್ತವವಾಗಿ ಅವರು ವಿಶ್ವಾಸಿಗಳೇ ಅಲ್ಲ. (ಅಂದರೆ ಅವರ ಹೃದಯದಲ್ಲಿ ವಿಶ್ವಾಸವಿಲ್ಲ.)” [ಕುರ್‌ಆನ್ 2:8]

**6. *ಇಖ್ಲಾಸ್* (ನಿಷ್ಕಳಂಕತೆ):** ಅಂದರೆ *ಶಿರ್ಕ್*‌ಗೆ (ಅಲ್ಲಾಹನೊಂದಿಗೆ ಸಹಭಾಗಿತ್ವ ಮಾಡುವುದಕ್ಕೆ ವಿರುದ್ಧವಾಗಿರುವ (ಅಂದರೆ ಅಲ್ಲಾಹನ ಮುಖವನ್ನು ಮಾತ್ರ ಉದ್ದೇಶಿಸುವ ರೀತಿಯಲ್ಲಿರುವ) ನಿಷ್ಕಳಂಕತೆ.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ فَٱعۡبُدِ ٱللَّهَ مُخۡلِصٗا لَّهُ ٱلدِّينَ ۝٢ أَلَا لِلَّهِ ٱلدِّينُ ٱلۡخَالِصُۚ ﴾ [الزمر : 2-3] .

“ಆದ್ದರಿಂದ ಧರ್ಮವನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ಮಾತ್ರ ನಿಷ್ಕಳಂಕಗೊಳಿಸಿ (ಅಂದರೆ ಅಲ್ಲಾಹನ ಮುಖವನ್ನು ಮಾತ್ರ ಆಶಿಸಿ) ಅಲ್ಲಾಹನನ್ನು ಆರಾಧಿಸಿ. ಅರಿಯಿರಿ! ನಿಷ್ಕಳಂಕವಾದ ಧರ್ಮವು ಅಲ್ಲಾಹನಿಗಿರುವುದಾಗಿದೆ.” [ಕುರ್‌ಆನ್ 39:2–3]

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ قُلۡ إِنِّيٓ أُمِرۡتُ أَنۡ أَعۡبُدَ ٱللَّهَ مُخۡلِصٗا لَّهُ ٱلدِّينَ ۝١١ ﴾ [الزمر : 11] .

“(ಓ ಪ್ರವಾದಿಯವರೇ!) ಹೇಳಿರಿ: ಖಂಡಿತವಾಗಿಯೂ ಧರ್ಮವನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ನಿಷ್ಕಳಂಕಗೊಳಿಸಿ ಅವನನ್ನು ಆರಾಧಿಸುವಂತೆ ನನ್ನೊಂದಿಗೆ ಆಜ್ಞಾಪಿಸಲಾಗಿದೆ.” [ಕುರ್‌ಆನ್ 39:11]

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ قُلِ ٱللَّهَ أَعۡبُدُ مُخۡلِصٗا لَّهُۥ دِينِي ۝١٤ ﴾ [الزمر : 14] .

“(ಓ ಪ್ರವಾದಿಯವರೇ!) ಹೇಳಿರಿ: ನಾನು ನನ್ನ ಧರ್ಮವನ್ನು ಅಲ್ಲಾಹನಿಗೆ ನಿಷ್ಕಳಂಕಗೊಳಿಸಿ ಅವನನ್ನು ಮಾತ್ರ ಆರಾಧಿಸುತ್ತೇನೆ.” [ಕುರ್‌ಆನ್ 39:14]

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ ﷺ قَالَ : {أَسْعَدُ النَّاسِ بِشَفَاعَتِي يَوْمَ الْقِيَامَةِ مَنْ قَالَ: لَا إِلَهَ إِلَّا اللَّهُ خَالِصًا مِنْ قِبَلِ نَفْسِهِ} رواه البخاري.

“ಅಬೂ ಹುರೈರಃ(ﷺ)ರಿಂದ ವರದಿ: ಪ್ರವಾದಿ(ﷺ) ಹೇಳಿದರು: ಪುನರುತ್ಥಾನ ದಿನದಂದು ನನ್ನ ಶಫಾಅತ್ ಸಿಗಲು ಅತ್ಯಧಿಕ ಭಾಗ್ಯವನ್ನು ಹೊಂದಿರುವವನು ಯಾರೆಂದರೆ ತನ್ನ ಹೃದಯಾಂತರಾಳದಿಂದ ನಿಷ್ಕಳಂಕವಾಗಿ (ಅಂದರೆ ಐಹಿಕವಾದ ಯಾವುದೇ ಲಾಭವನ್ನೋ, ಸ್ಥಾನಮಾನವನ್ನೋ ಉದ್ದೇಶಿಸದೆ ಕೇವಲ ಅಲ್ಲಾಹನ ಮುಖವನ್ನು ಮಾತ್ರ ಆಶಿಸಿ) *ಲಾ ಇಲಾಹ ಇಲ್ಲಲ್ಲಾಹ್* ಎಂದು ಹೇಳಿದವನಾಗಿದ್ದಾನೆ.” [ಅಲ್‌ಬುಖಾರಿ]

ಉತ್ಬಾನ್(ﷺ)ರವರ ಹದೀಸಿನಲ್ಲಿರುವ ಪ್ರವಾದಿ(ﷺ)ರವರ ಮಾತಿನ ಉದ್ದೇಶವೂ ಇದೇ ಆಗಿದೆ:

{فَإِنَّ اللَّهَ حَرَّمَ عَلَى النَّارِ مَنْ قَالَ لَا إِلَهَ إِلَّا اللَّهُ يَبْتَغِي بِذَلِكَ وَجْهَ اللَّهِ} رواه البخاري.

“ಅಲ್ಲಾಹನ ಮುಖವನ್ನು ಮಾತ್ರ ಉದ್ದೇಶಿಸಿ *ಲಾ ಇಲಾಹ ಇಲ್ಲಲ್ಲಾಹ್* ಎಂದು ಉಚ್ಛರಿಸಿದವನನ್ನು ಅಲ್ಲಾಹು ಖಂಡಿತವಾಗಿಯೂ ನರಕಾಗ್ನಿಗೆ ನಿಷಿದ್ಧಗೊಳಿಸುವನು.” [ಅಲ್‌ಬುಖಾರಿ]

ಇಖ್ಲಾಸ್ (ನಿಷ್ಕಳಂಕತೆ) ಎಂದರೆ ಇಬಾದತ್‌ಗಳನ್ನು ಅಲ್ಲಾಹನಿಗೆ ಮಾತ್ರ ಸಲ್ಲಿಸುವುದು, ಅವುಗಳಲ್ಲಿ ಒಂದಂಶವನ್ನೂ ಅಲ್ಲಾಹು ಅಲ್ಲದವರಿಗೆ ಸಲ್ಲಿಸದಿರುವುದು, ಅವರು ಅಲ್ಲಾಹನ ಸಾಮೀಪ್ಯ ಪಡೆದ ಮಲಕ್‌ಗಳಾಗಿದ್ದರೂ ಸರಿ, ಅಥವಾ ಜನರಿಗೆ ಸನ್ಮಾರ್ಗ ತೋರಿಸುವುದಕ್ಕಾಗಿ ಕಳುಹಿಸಲಾದ ಪ್ರವಾದಿಗಳಾಗಿದ್ದರೂ ಸರಿ. ಅದೇ ರೀತಿ ಇಖ್ಲಾಸ್ ಎಂದರೆ ಪ್ರವಾದಿ(ﷺ)ರವರ ಸುನ್ನತ್ತನ್ನು ಮಾತ್ರ ಅನುಸರಿಸುವುದು, ಸರ್ವ ಬಿದ್‌ಅತ್‌ಗಳನ್ನು ಮತ್ತು ಅವರ ಸುನ್ನತ್ತಿಗೆ ವಿರುದ್ಧವಾಗಿರುವ ಸರ್ವ ವಿಷಯಗಳನ್ನು ತೊರೆಯುವುದು. ಅದೇ ರೀತಿ ಪ್ರವಾದಿ(ﷺ)ರವರು ತಂದ ಶರೀಅತ್ತಿಗೆ ವಿರುದ್ಧವಾಗಿರುವ ಮನುಷ್ಯ ನಿರ್ಮಿತವಾದ ಸರ್ವ ಕಾನೂನುಗಳನ್ನು ವರ್ಜಿಸುವುದು. ಯಾರು ಈ ಕಾನೂನುಗಳನ್ನು ತೃಪ್ತಿಪಡುತ್ತಾನೋ ಅಥವಾ ಅವುಗಳಿಂದ ತೀರ್ಪು ಪಡೆಯುತ್ತಾನೋ ಅವನು ಇಖ್ಲಾಸ್ (ನಿಷ್ಕಳಂಕತೆ) ಇರುವವನಲ್ಲ.

7. ***ಮಹಬ್ಬತ್* (ಪ್ರೀತಿ):** ಅಂದರೆ ಅನಿಷ್ಟ ಮತ್ತು ದ್ವೇಷಕ್ಕೆ ವಿರುದ್ಧವಾಗಿರುವ (ಅಂದರೆ ಅನಿಷ್ಟ ಮತ್ತು ದ್ವೇಷವನ್ನು ಸಂಪೂರ್ಣ ನಿರ್ಮೂಲನೆಗೊಳಿಸುವ) ಪ್ರೀತಿ. ಆದ್ದರಿಂದ *ಲಾ ಇಲಾಹ ಇಲ್ಲಲ್ಲಾಹ್* ಎಂದು ಉಚ್ಛರಿಸಿದ ವ್ಯಕ್ತಿ ಅಲ್ಲಾಹನನ್ನು, ಅವನ ಇಷ್ಟದಾಸರನ್ನು, ಅವನ ಆಜ್ಞಾಪಾಲನೆ ಮಾಡುವ ವಿಶ್ವಾಸಿಗಳನ್ನು ಪ್ರೀತಿಸಬೇಕು. ಅಲ್ಲಾಹನಲ್ಲಿರುವ ಪ್ರೀತಿಯು ಸತ್ಯಸಂಧವಾಗಿದ್ದರೆ ಅದರ ಕುರುಹುಗಳು ದೇಹದಲ್ಲಿ ಮತ್ತು ಕರ್ಮಗಳಲ್ಲಿ ಗೋಚರಿಸುತ್ತವೆ. ಅಲ್ಲಾಹನನ್ನು ಸತ್ಯಸಂಧವಾಗಿ ಪ್ರೀತಿಸುವ ವ್ಯಕ್ತಿ ಅಲ್ಲಾಹನ ಆಜ್ಞೆಗಳನ್ನು ಮತ್ತು ಅವನ ರಸೂಲರ(ﷺ) ಆಜ್ಞೆಗಳನ್ನು ಪಾಲಿಸುತ್ತಾನೆ. ಅಲ್ಲಾಹನನ್ನು ಆರಾಧಿಸಬೇಕಾದ ರೀತಿಯಲ್ಲೇ ಆರಾಧಿಸುತ್ತಾನೆ. ಅಲ್ಲಾಹನ ಆಜ್ಞಾಪಾಲನೆ ಮಾಡುವುದನ್ನು ಇಷ್ಟಪಡುತ್ತಾನೆ. ಅಲ್ಲಾಹು ಇಷ್ಟಪಡುವ ಸರ್ವ ಮಾತು ಮತ್ತು ಕ್ರಿಯೆಗಳನ್ನು ಮಾಡಲು ಅವನು ಧಾವಂತದಿಂದ ಮುನ್ನುಗ್ಗುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸಲು ಭಯಪಡುತ್ತಾನೆ. ಅಲ್ಲಾಹು ವಿರೋಧಿಸಿದವುಗಳಿಂದ ದೂರವಾಗುತ್ತಾನೆ. ಇಂತಹವನು ಅಲ್ಲಾಹನನ್ನು ಸತ್ಯಸಂಧವಾಗಿ ಪ್ರೀತಿಸುವವನಾಗಿದ್ದಾನೆ.

ಕೆಲವು ಉಲಮಾಗಳು ಹೇಳುತ್ತಾರೆ: ನಾನು ಅಲ್ಲಾಹನನ್ನು ಪ್ರೀತಿಸುತ್ತೇನೆ ಎಂದು ವಾದಿಸುವ, ಆದರೆ ಆ ಪ್ರೀತಿಯು ಆವಶ್ಯಪಡುವ ವಿಷಯಗಳನ್ನು ಮಾಡದ ವ್ಯಕ್ತಿಯ ವಾದವು ನಿಷ್ಫಲವಾಗಿದೆ. ಅಲ್ಲಾಹನನ್ನು ಪ್ರೀತಿಸುವುದಕ್ಕೆ ಅಲ್ಲಾಹು ಈ ಕೆಳಗಿನ ಆಯತ್ತಿನಲ್ಲಿ ಒಂದು ಷರತ್ತನ್ನಿಟ್ಟಿದ್ದಾನೆ:

﴿ قُلۡ إِن كُنتُمۡ تُحِبُّونَ ٱللَّهَ فَٱتَّبِعُونِي يُحۡبِبۡكُمُ ٱللَّهُ وَيَغۡفِرۡ لَكُمۡ ذُنُوبَكُمۡۚ ﴾ [آل عمران : 31] .

“(ಓ ಪ್ರವಾದಿಯವರೇ!) ಹೇಳಿರಿ: ನೀವು ಅಲ್ಲಾಹನನ್ನು ಪ್ರೀತಿಸುತ್ತೀರಿ ಎಂದಾದರೆ ನನ್ನನ್ನು ಅನುಸರಿಸಿರಿ. ಹಾಗಾದರೆ ಅಲ್ಲಾಹು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು.” [ಕುರ್‌ಆನ್ 3:31]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com